


ಬಿಸಿ ಆವಿ ಕೈಗೆ ತಾಕಿತು. “ಉಫ್” ಎಂದು ಊದಿದವಳೇ ಮತ್ತೆ ಲಟ್ಟಿಸಲಾರಂಭಿಸಿದೆ. ಚಂದ್ರಕಾಂತನ ನೆನಪಾದರೆ ಬಿಸಿ ತಾಗುವುದು ದಿಟವೇ... ಮೈಗೂ... ಮನಸ್ಸಿಗೂ...

ನಾನಿನ್ನೂ ಶಾಲೆಯಲ್ಲಿದ್ದ ದಿನಗಳು. ಹಳೇ ಹುಬ್ಬಳ್ಳಿಯಲ್ಲಿ ನಮ್ಮ ಮನೆ. ಅತ್ತ ಸ್ವಲ್ಪ ದೂರ ನಡೆದರೆ ಸಿದ್ಧಾರೂಢ ಸ್ವಾಮಿಯ ಮಠ... ಇತ್ತ ಕೊಂಚ ದೂರ ನಡೆದರೆ ಕೃಷ್ಣೇಂದ್ರ ಸ್ವಾಮಿಯ ಮಠ. ಅಂಥ ಆಯಕಟ್ಟಿನ ಜಾಗದಲ್ಲಿತ್ತು ಮನೆ. ಮನೆಯೆಂದರೇನು... ಇಂದಿನ ದೊಡ್ಡ ಅಪಾರ್ಟ್‌ಮೆಂಟ್... ಬಂಗಲೆಗಳಂತಲ್ಲ. ಇರಲು ನೆಲೆಯಾಗಿದ್ದೊಂದು ಸ್ವಂತದ ಗುಬ್ಬಿ ಗೂಡು. ಟು ಬೆಡ್‌ರೂಮ್... ಹಾಲ್... ಕಿಚನ್ ಎಲ್ಲಾ ಕೇಳಬೇಡಿ. ಹೊರಗೆ ಅಂಗೈ ಅಗಲದ ಅಂಗಳ. ಚಪ್ಪಲಿ ಬಿಟ್ಟು ಒಳಬಂದರೆ ನಾಲ್ಕು ಜನ ಕೂರಬಹುದಾದ ಪಡಸಾಲೆ. ನಂತರ ತುಸುವೇ ದೊಡ್ಡದಾದ ನಡುಮನೆ. ನೆಂಟರು ಬಂದಾಗ ಊಟ, ತಿಂಡಿ, ಮಲಗುವುದೆಲ್ಲ ಇಲ್ಲೇ. ಅದಕ್ಕೆ ತಾಗಿಯೇ ಅಡುಗೆಮನೆ. ಒಟ್ಟಿಗೆ ಐದಾರು